


# ರಾಮಕೃಷ್ಣ ಮಹಾಸಂಘದ ಇತ್ತೀಚಿನ ಚಟುವಟಿಕೆಗಳು

**ಹೊಸ ಉಪ-ಶಾಖಾ ಕೇಂದ್ರಗಳು : ತಿರುವಲ್ಲ** ರಾಮಕೃಷ್ಣ ಆಶ್ರಮದ ಉಪ-ಕೇಂದ್ರವು ಪತ್ತನಂತಿಟ್ಟದಲ್ಲಿ ಆರಂಭವಾಯಿತು. ಅಯೋಧ್ಯೆಗೆ ಸಮೀಪದ **ಬಸ್ತಿ** ಎಂಬಲ್ಲಿ ಹೊಸದಾಗಿ ಖರೀದಿಸಲಾದ ಸ್ಥಳದಲ್ಲಿ ರಾಮಕೃಷ್ಣ ಮಠದ ಕಟ್ಟಡವನ್ನು ಉದ್ಘಾಟಿಸಲಾಯಿತು. ಪ್ರಾರ್ಥನಾ ಮಂದಿರ, ಸಾಧುನಿವಾಸ ಹಾಗೂ ಆಫೀಸ್ – ಇವುಗಳನ್ನು ಒಳಗೊಂಡಿರುವ ಈ ಕಟ್ಟಡವನ್ನು ಸ್ವಾಮಿ ನಿರಂಜನಾನಂದಜಿ ಮಹಾರಾಜ್ ಅವರ ಜನ್ಮದಿನವಾದ ಆಗಸ್ಟ್ ೩ರಂದು ಸ್ವಾಮಿ ಗೌತಮಾನಂದಜಿ ಮಹಾರಾಜ್ ಉದ್ಘಾಟಿಸಿದರು. ಈ ಉಪ-ಕೇಂದ್ರವು ರಾಮಕೃಷ್ಣ ಮಠದ ಪ್ರಧಾನ ಕೇಂದ್ರವಾದ ಬೇಲೂರು ಮಠದ ಮೂಲಕವೇ ಕಾರ್ಯವನ್ನು ನಿರ್ವಹಿಸಲಿದೆ.

**ರಾಮಕೃಷ್ಣ ಮಿಷನಿನ ೧೨೫ನೇ ವಾರ್ಷಿಕೋತ್ಸವ : ದೆಹಲಿ** ಕೇಂದ್ರವು ಆಗಸ್ಟ್ ೪ರಂದು ನಡೆಸಿದ ವಿಚಾರ ಸಂಕಿರಣದಲ್ಲಿ ಡಾ. ಕರಣ್ ಸಿಂಗ್ ಅವರು ಭಾಗವಹಿಸಿ ಮಾತನಾಡಿದರು. ಸುಮಾರು ೧೦೦೦ ಮಂದಿ ಸಭಿಕರು ಉಪಸ್ಥಿತರಿದ್ದರು.

**ಶಾಖಾಕೇಂದ್ರಗಳ ಚಟುವಟಿಕೆಗಳು: ರಾಯಪುರ** ಆಶ್ರಮದಲ್ಲಿ ಆಗಸ್ಟ್ ೧೩ರಂದು ಪ್ರಧಾನ ಕಾರ್ಯದರ್ಶಿಯವರು 'ವಿವೇಕಾನಂದ ಅಧ್ಯಯನ ಕೇಂದ್ರ'ವನ್ನು ಉದ್ಘಾಟಿಸಿದರು. ಸ್ವಾಮಿ ಗೌತಮಾನಂದಜಿಯವರು **ಚನ್ನೈ** ಮಠದ ಗ್ರಾಮೀಣಾಭಿವೃದ್ಧಿ ಕೇಂದ್ರ ಮೆಯ್ಯೂರ್‌ನಲ್ಲಿ ಹೊಸ ಎರಡು ಕಟ್ಟಡಗಳನ್ನು ಉದ್ಘಾಟಿಸಿದರು. **ಝೂರ್‌ಗ್ರಾಮ್** ಕೇಂದ್ರದ ಶಾಲೆಯ ಮೂವರು ಬಾಲಕಿಯರು ಜುಲೈ ೩೦ರಂದು ನಡೆದ ಕರಾಟೆ ಸ್ಪರ್ಧೆಯಲ್ಲಿ ಮೂರನೇ ಪ್ರಶಸ್ತಿಯನ್ನು ಪಡೆದರು. **ರಾಜಾರ್‌ಹಾಟ್-ವಿಷ್ಣುಪುರ** ಕೇಂದ್ರದಲ್ಲಿ ಹೊಸದಾಗಿ ನಿರ್ಮಿತವಾದ ಶ್ರೀರಾಮಕೃಷ್ಣ ಮಂದಿರವನ್ನು ಸ್ವಾಮಿ ನಿರಂಜನಾನಂದರ ಜನ್ಮದಿನದಂದು ಸ್ವಾಮಿ ಸುಹಿತಾನಂದಜಿಯವರು ಉದ್ಘಾಟಿಸಿದರು. ವಿಶೇಷ ಪೂಜೆ, ಹೋಮ, ಸಾರ್ವಜನಿಕ ಸಭೆ, ಭಕ್ತಿಗೀತೆ ಹಾಗೂ ಇತರ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. **ಬೋಲ್‌ಪಾರ್** ಮಠದಲ್ಲಿ ಆಗಸ್ಟ್ ೩೧ರಂದು ಹೊಸದಾಗಿ ನಿರ್ಮಿತವಾದ ಸಾಧುನಿವಾಸದ ಹೊಸ ಸಂಕೀರ್ಣವನ್ನು ಪ್ರಧಾನ ಕಾರ್ಯದರ್ಶಿಗಳು ಉದ್ಘಾಟಿಸಿದರು.

ವಿವಿಧ ಕೇಂದ್ರಗಳಲ್ಲಿ ಮೌಲ್ಯ ಶಿಕ್ಷಣ ತರಬೇತಿ ಹಾಗೂ ಯುವ ಸಮ್ಮೇಳನಗಳು ನಡೆದವು. ಅದೇ ರೀತಿ ಉಚಿತ ವೈದ್ಯಕೀಯ ಹಾಗೂ ನೇತ್ರ ಚಿಕಿತ್ಸೆ ಶಿಬಿರಗಳು ನಡೆದವು.


ಬಸ್ತಿ, ಅಯೋಧ್ಯೆ


ರಾಯಪುರ

Managing Editor : Swami Muktidananda     Editor : Swami Jnanayogananda
Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020